ಇ) ಇನ್ನು ಹೆಚ್ಚಿನ ಯಾತ್ರಾರ್ಥಿಗಳನ್ನು ಆಕರ್ಷಿಸಲು ಮತ್ತು ಅವರಿಗೆ ಅನುಕೂಲತೆಯಂನ್ನು ಕಲ್ಪಿಸಿ ಕೊಡುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ ಮಂತ್ರಿಗಳು).—

ಅ) ಪ್ರವಾಸೋದ್ಯಮ ಇಲಾಖೆಯಿಂದ ಆಂಗ್ಲಭಾಷೆಯಲ್ಲಿ ಯಾತ್ರಿಕರ ಅನುಕೂಲಕ್ಕಾಗಿ ಟೂರಿಸ್ಟ್ ಗೈಡನ್ನು ಪ್ರಕಟಿಸಿರುತ್ತಾರೆ.

ಆ) ನಿಜ

ಈ) ಒಂದು ಛತ್ರವನ್ನು ಕಟ್ಟಿಸಲು ಆರಮನೆ ಮುಜರಾಯಿ ಆಡಳಿತ ಸಮಿತಿಯವರು ತೀರ್ಮಾನಿಸಿದ್ದಾರೆ.

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ರಾಜ್ಯದ ಬಗರ್ ಹುಕುಂ ಸಾಗುವಳಿದಾರರ ಜಮೀನು ಮಾಡುವ ಬಗ್ಗೆ ಅರ್ಜಿ ಹಾಕಲು ಅವಧಿ ವಿಸ್ತರಣೆ ಮಾಡುವ ಬಗ್ಗೆ

೭೯(೨೮೨) ಶ್ರೀ ಬಿ. ಎಸ್. ಯಡಿಯೂರಪ್ಪ(ಶಿಕಾರಿಪುರ).—ಮಾನ್ಯ ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಬಡ ರೈತರಿಗೆ ಜಮೀನು ಖಾಯಂ ಮಾಡುವ ಬಗ್ಗೆ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ ಮಾಡುವ ಬಗ್ಗೆ ಸರ್ಕಾರದವರು ಏನಾದರೂ ಕ್ರಮ ಕೈಗೊಂಡಿದ್ದಾರೆಯೇ?

ಆ) ಕ್ರಮ ಕೈಕೊಳ್ಳದಿದ್ದಲ್ಲಿ ಕಾರಣವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು).—

ಅ) ಈ ಹಿಂದೆ ಸರ್ಕಾರಿ ಜಮೀನನ್ನು ಬಗರ್ ಹುಕುಂ ಸಾಗುವಳಿ ಮಾಡಿರುವಂತಹ ಹರಿಜನ ಗಿರಿಜನ ಭೂರಹಿತರು, ಭೂಕಾರ್ಮಿಕರು, ಸಣ್ಣ ಹಾಗೂ ಅತೀ ಸಣ್ಣ ರೈತರುಗಳಿಗೆ ಅರ್ಜಿ ಹಾಕಿಕೊಳ್ಳಲು ೧೫-೧೧-೭೮ರ ವರೆಗೂ ಮತ್ತು ಹರಿಜನ ಗಿರಿಜನರಿಗೆ ಮಾತ್ರ ಅನುಕೂಲವಾಗುವಂತೆ ಅರ್ಜಿ ಹಾಕಿಕೊಳ್ಳಲು ೧೫-೮-೮೨ರವರೆಗೂ ಕಾಲ ನಿಗಧಿಪಡಿಸಲಾಗಿತ್ತು. ಅರ್ಹರಾದ ಬಹುತೇಕ ಎಲ್ಲರಿಗೂ ಸರ್ಕಾರದ ಬಗರ್ ಹುಕುಂ ಭೂಮಿಯನ್ನು ಈಗಾಗಲೇ ಸಕ್ರೀಯಗೊಳಿಸಲಾಗಿದೆ. ಇತ್ತೀಚೆಗೆ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿ ಸಾಗುವಳಿ ಮಾಡಿದಂತಹ ಜನರಲ್ಲಿನ ಅನಿಶ್ಚತತೆಯನ್ನು ಹೋಗಲಾಡಿಸಲು ಹಾಗೂ ವ್ಯವಸಾಯದ ಕಸಬನ್ನು ಸರಿಯಾದ ರೀತಿಯಲ್ಲಿ ಮಾಡಲು ಭೂ ಕಂದಾಯ ಅಧಿನಿಯಮ ೧೯೬೪ರ ಕಲಂ ೯೪ಳಕ್ಕೆ ಸೂಕ್ತ ತಿದ್ದುಪಡಿಯನ್ನು ಜಾರಿಗೆ ತರುವ ವಿಷಯ ಸರ್ಕಾರದ ಶೀರ್ಷ ಪರಿಶೀಲನೆಯಲ್ಲಿರುವುದರಿಂದ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ ಮಾಡುವ ಪ್ರಶ್ನೆ ಸದ ಸದರೀ ತಿದ್ದುಪಡಿ ವಿಧೇಯಕದಲ್ಲಿ ಆಳವಡಿಸಲು ಪರಿಶೀಲಿಸಲಾಗುತ್ತದೆ.

ಆ) ಉಪ ಪ್ರಶ್ನೆ (ಅ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ.ಎಸ್.ಐ ಆಸ್ಪತ್ರೆ (ಶಹಬಾದ್) ಬಗ್ಗೆ

೮೦(೨೧೦) ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಶಹಬಾದ್‌ನಲ್ಲಿ ೫೨ ಹಾಸಿಗೆಯ ಒಂದು ಬೃಹತ್ ಕಟ್ಟಡವನ್ನು ಆಸ್ಪತ್ರೆಯ ಸಲುವಾಗಿ ಕಟ್ಟಲು ಬೇಕಾದ ಜಮೀನು, ಹಣ ಮತ್ತು ತಾಂತ್ರಿಕ ಒಪ್ಪಿಗೆ ಎರಡು ವರ್ಷಗಳಿಂದ ದೊರಕಿದ್ದರೂ, ಅದನ್ನು ಇನ್ನೂ ಕಾರ್ಯಗತ ಗೊಳಿಸದೇ ಇರಲು ಕಾರಣವೇನು ?